**ಸಾಕ್ಷಿಯನ್ನು ದಿನಾಂಕಃ 19.02.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ ವೈ ಎಂ ಎಂ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಯಾಗಿ ಗುರುತಿಸುವಂತೆ ಕೋರುತ್ತೇನೆ.

| ಕ್ರಮ ಸಂಖ್ಯೆ : | | ದಾಖಲೆಗಳು |
|---|---|---|
| 1 | : | ಬೆಸಗರ ಹಳ್ಳಿ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 76/2022 ರಲ್ಲಿನ ಅಂತಿಮ ವರದಿಯ ದೃಢೀಕೃತ ನಕಲು |
| 2 | : | ಬೆಸಗರ ಹಳ್ಳಿ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 76/2022 ರಲ್ಲಿನ ಪ್ರಥಮ ವರ್ತಮಾನ ವರದಿಯ ದೃಢೀಕೃತ ನಕಲು |
| 3 | : | ಬೆಸಗರ ಹಳ್ಳಿ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 76/2022 ರಲ್ಲಿ ಪೋಲೀಸರು ತಯಾರಿಸಿದ ಅಪರಾಧ ವಿವರ ನಮೂನೆ ಮತ್ತು ಸ್ಥಳ ಪಂಚನಾಮೆಯ ದೃಢೀಕೃತ ನಕಲು. |
| 4 | : | ಬೆಸಗರ ಹಳ್ಳಿ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 76/2022 ರಲ್ಲಿ ಪೋಲೀಸರು ತಯಾರಿಸಿದ ಅಮಾನತ್ ಮಹಜರ್ ನ ದೃಢೀಕೃತ ನಕಲು |
| 5 | : | ಬೆಸಗರ ಹಳ್ಳಿ ಪೋಲೀಸ್ ಠಾಣೆಯ ಅಪರಾಧ ಸಂಖ್ಯೆ 76/2022 ರಲ್ಲಿ ಮೋಟಾರ್ ವಾಹನ ನಿರೀಕ್ಷಕರು ತಯಾರಿಸಿದ ಮೋಟಾರ್ ವಾಹನ ಅಪಘಾತ ವರದಿಯ ದೃಢೀಕೃತ ನಕಲು |
| 6 | : | ಗಾಯದ ಪ್ರಮಾಣ ಪತ್ರದ ದೃಢೀಕೃತ ನಕಲು |
| 7 | : | ಎಂ ಎಲ್ ಸಿ ದಾಖಲಾತಿ ಪುಸ್ತಕದ ದೃಢೀಕೃತ ನಕಲು |

**ಮೇಲ್ಕಂಡ ರ ದಾಖಲಾತಿಗಳನ್ನು ನಿಶಾನೆ ಪಿಃ 1 ರಿಂದ 7 ಎಂದು ಗುರುತಿಸಲಾಯಿತು.**

**ಈ ಹಂತದಲ್ಲಿ ಅರ್ಜಿದಾರರ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗಾಗಿ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.